ಅರ್ಥೈಸಿಕೊಳ್ಳುವಷ್ಟರಲ್ಲಿ, ಹತೋಟಿ ಮೀರಿ ತನ್ನಿಂದ ತಪ್ಪಾಯ್ತು... ಆದರೆ, ಅದು ಹೀಗೆ ಬಹಿರಂಗವಾಗಬೇಕೇ?

ಗೌತಮ ಹೊರಗೆ ಆರ್ಭಟಿಸುತ್ತಿದ್ದ.

'ದೇವೇಂದ್ರಾ... ಪ್ರಪಂಚದ ಎಲ್ಲ ಹೆಂಗಸರು ಬೇಕಲ್ಲವೇ ನಿನಗೆ? ಕೊನೆಗೆ ನನ್ನ ಪತ್ನಿಯೂ?... ಎಷ್ಟು ದಿನಗಳಿಂದ ಹೀಗೆ ಬರುತ್ತಿದ್ದೆ? ಬೆಳಗಿನ ನಸುಕಿನಲ್ಲಿ... ನಾನಿಲ್ಲದಾಗ? ಹಾಂ? ಛೀ, ನಿನ್ನ ರೂಪದ ಮೇಲಿನ ಅಹಂಕಾರದಿಂದಲ್ಲವೇ ನೀನು ಹೀಗೆ ವರ್ತಿಸಿದ್ದು? ಇನ್ನೆಂದೂ ಯಾವ ಹೆಣ್ಣೂ ತಿರುಗಿ ನೋಡದಷ್ಟು ಕುರೂಪಿಯಾಗು ನೀನು! ತೊಲಗಾಚೆ... ತೊಲಗು...'

ಅಷ್ಟೆಲ್ಲ ಕೂಗಾಡಿದ ಪತಿ, ನಂತರವಾದರೂ ಸುಮ್ಮನಿದ್ದರೇ?

ಒಳಗಡೆ ಕಂಗಾಲಾಗಿ ಕುಳಿತಿದ್ದ ತನ್ನನ್ನೂ ಸೆಳೆತಂದು ಹೊರಗೆ ನಿಲ್ಲಿಸಿದ್ದರಲ್ಲ! ಆಗಲೇ ಬೆಳಕು ಹರಿಯತೊಡಗಿ, ಜೊತೆಗೆ ಈ ಆರ್ಭಟಕ್ಕೆ ಆಶ್ರಮದ ಎಲ್ಲರೂ ಎದ್ದು ಹೊರಬರತೊಡಗಿ ತಮ್ಮ ಸುತ್ತಲೂ ಗುಂಪು ಸೇರಿ ಬಿಟ್ಟಿತ್ತು! ಅವಮಾನದಿಂದ ಕುತ್ತಿಗೆ ಹಿಸುಕಿಕೊಳ್ಳಲೇ ಅನ್ನಿಸಿತ್ತು! ಅವನು ದೇವೇಂದ್ರ... ಅಷ್ಟೆಲ್ಲ ಬಯ್ಯಿಸಿಕೊಂಡು ಶಪಿಸಿಕೊಂಡ ನಂತರವೂ... ಅಲ್ಲೇ ನಿಂತು ಕತ್ತೆತ್ತಿ ತನ್ನತ್ತ ನೋಡಿದ್ದ. ಆ ಕಣ್ಣುಗಳು ಎಷ್ಟೊಂದು ಅಪಮಾನಿತ ಆಗಿದ್ದವು!

ಅನಂತರ ತಲೆ ತಗ್ಗಿಸಿಕೊಂಡು ಹೊರಟು ಹೋಗಿದ್ದ.

ಅವನ ಹಿಂದೆಯೇ ಹೋಗಿಬಿಡಬೇಕೆಂಬ ಹಂಬಲ ಆಕ್ಷಣ ಬಲವಾಗಿ ಬಿಟ್ಟಿತ್ತು. ಆದರೆ ವಾಸ್ತವ ಹಿಂಜಗ್ಗಿತ್ತು!

ಗೌತಮರ ಆರ್ಭಟ! ಅಬ್ಬರ ನಿಲ್ಲಲೇ ಇಲ್ಲ! ಎಲ್ಲರೆದುರಿಗೆ, ಅಷ್ಟೆಲ್ಲ ಶಿಷ್ಯ–ಶಿಷ್ಯೆಯರೆದುರಿಗೆ ವಾಚಾಮಗೋಚರವಾಗಿ ಬೈದದ್ದೆಷ್ಟು? ಶಪಿಸಿದ್ದೆಷ್ಟು?

ಸಿಟ್ಟು, ಅಪಮಾನಗಳಿಗಿಂತಲೂ ಆಶ್ಚರ್ಯವೇ ಹೆಚ್ಚಾಗಿತ್ತು ತನಗೆ! ಅರೆ, ಋಷಿಗಳಾದವರಿಗೆ ಈ ಕೋಪತಾಪವೇಕೆ? ಮತ್ಸರವೇಕೆ? ಸಾಮಾನ್ಯ ಮನುಷ್ಯನ ಮಟ್ಟಕ್ಕೆ ಇಳಿದರಲ್ಲ ಈ ತಪಸ್ವಿ ಗೌತಮರು! ಇಷ್ಟು ವರ್ಷ ಸಂಸಾರ ಮಾಡಿ, ಈಗ.... ಒಂದೇ ಕ್ಷಣದಲ್ಲಿ ನಾವಿಬ್ಬರು ಪತಿಪತ್ನಿಯರು ಪರಕೀಯರು ಆಗಿಬಿಟ್ಟೆವಲ್ಲ! ಗೌತಮ ಹೇಳುತ್ತಿದ್ದ...

'ಇನ್ನು ನಿನ್ನಂಥ ಹೆಣ್ಣಿನೊಂದಿಗೆ ಬಾಳಲಾರೆ ನಾನು. ಹೊರಟುಹೋಗು! ತೊಲಗು ನನ್ನ ಆಶ್ರಮದಾಚೆಗೆ ಎಲ್ಲಾದರೂ ಬಿದ್ದಿರು ಕಲ್ಲಾಗಿ!'

ಆ ಮಾತಿನಿಂದ ಅವಳಿಗೆ ವಿಷಾದವೆನ್ನಿಸಿತಷ್ಟೇ, ಹಿಂದುಮುಂದು ಯೋಚಿಸದೇ ರಂಪ ಮಾಡಿ, ತಮ್ಮ ಸಂಸಾರವನ್ನು ತಾವೇ ಬೀದಿಗೆಳೆದ ಪತಿಯೊಂದಿಗೆ ಒಂದೇ ಸೂರಿನಡಿ ಇರುವುದಕ್ಕಿಂತ ದೂರ ಹೋಗಿ ಬಿಡುವುದೊಳ್ಳೆಯದು. ಎನ್ನಿಸಿ, ಮಾತಾಡದೆ ಆಶ್ರಮದಿಂದ ಹೊರ ನಡೆದುಬಿಟ್ಟಳು!

ನದಿಯ ಇನ್ನೊಂದು ಬದಿಯಲ್ಲಿ ಪರ್ಣಕುಟಿ ಒಂದನ್ನು ಕಟ್ಟಿಕೊಂಡು, ಒಂಟಿಯಾಗಿ ಇದ್ದುಬಿಟ್ಟಳು ಯಾರ ತಂಟೆಗೆ ಹೋಗದೆ!

ಒಂದರ್ಥದಲ್ಲಿ ಕಲ್ಲೊಂದು ಹಾದಿಯಲ್ಲಿ ಬಿದ್ದಂತಿತ್ತು ತನ್ನ ಜೀವನ!

ಒಂದಲ್ಲಾ... ಎರಡಲ್ಲ... ಪೂರ್ತಿ ಇಪ್ಪತ್ತು ವರ್ಷ!

ಮಧ್ಯೆ ಒಂದೆರಡು ಬಾರಿ ಶಿಷ್ಯರ ಮೂಲಕ ಹೇಳಿ ಕಳುಹಿಸಿದ ಗೌತಮ! ಅವಳಿಗೆ ತಿರುಗಿ ಪತಿಗೃಹಕ್ಕೆ ಹೋಗುವ ಆಸಕ್ತಿಯೇ ಉಳಿದಿರಲಿಲ್ಲ. ಅಂದು ಒಮ್ಮೆ ಮಾತ್ರ ಸ್ಪರ್ಶಿಸಿ ಹೊರಟು ಹೋಗಿದ್ದ ದೇವೇಂದ್ರ ಮತ್ತೆಂದೂ ಕಾಣಿಸಿಕೊಂಡಿರಲಿಲ್ಲ.

ಅನಂತರ... ಒಂದು ದಿನ ಬಂದಿದ್ದ... ಶ್ರೀರಾಮಚಂದ್ರ! ಸೋದರ ಲಕ್ಷ್ಮಣನೊಂದಿಗೆ! ಅಬ್ಬಾ.... ಎಂಥ ವ್ಯಕ್ತಿ ಅವನು!